**ಡಾ. ಟಿ.ಎನ್. ನಾಗರತ್ನ**
ನಂ. 128, 11ನೇ ಮುಖ್ಯರಸ್ತೆ,
ಕಾಮಾಕ್ಷಿ ಆಸ್ಪತ್ರೆ ರಸ್ತೆ,
ಸರಸ್ವತಿಪುರಂ, ಮೈಸೂರು
ದೂ.ಸಂ.: 0821–25437983, 9448945877



ದಿನಾಂಕ: **22.01.2024**

ಆತ್ಮೀಯರೇ, ತಮಗೆ ಅಭಿಮಾನಪೂರ್ವಕ ಶುಭಾಶಯಗಳು.

ವೃತ್ತಿಯಲ್ಲಿ ಇಂಜಿನಿಯರ್ ಪ್ರವೃತ್ತಿಯಲ್ಲಿ ಸಂಶೋಧನಾ ಪೂರ್ವಕ ಕೀರ್ತನೆಗಳ ಸಂಗ್ರಹಕಾರರಾಗಿರುವ ಶ್ರೀ ದಂಡಿನ ಅನಂತರಾವ್ ಅವರು ತಮ್ಮ ಸ್ವ-ನಿವೃತ್ತಿಯ ನಂತರ ಹರಿದಾಸರ ಸೇವಾಕೈಂಕರ್ಯದಲ್ಲಿ ತೊಡಗಿರುವುದು ಅಭಿನಂದನಾರ್ಹ. **ದಾಸಶ್ರೇಷ್ಠ ಶ್ರೀಪುರಂದರದಾಸರ ಈ ವರೆಗೆ ಪ್ರಕಟಿತ ಕೀರ್ತನೆಗಳ ಶುದ್ಧ ಸಾಹಿತ್ಯ ಸಂಗ್ರಹ, ಅವುಗಳ ಸರಳ ಅರ್ಥಾನುಸಂಧಾನಕ್ಕೆ ಅನುವಾಗುವ ಶಬ್ದಾರ್ಥ ವಿವರಣೆ, ಅದಕ್ಕೆ ಪೂರಕವಾಗಿರುವ ವಿದ್ವಾಂಸರ ಪ್ರವಚನದ ಭಾಗಗಳು, ಸ್ವರಸಂಯೋಜನೆಯ – ಸಂಗೀತದ ಮೂಲಕ ಹಲವು ವಿದ್ವಾಂಸರು ಹಾಡಿರುವ ಧ್ವನಿ ಮುದ್ರಿಕೆಗಳ ಸಂಗ್ರಹಗಳನ್ನು ಒಂದೆಡೆ ಕ್ರೋಡೀಕರಿಸಿ** ಆಸಕ್ತರ ಮುಖ್ಯವಾಗಿ **ಯುವ ಜನತೆಯ ಕೈಗೆ ಕೊಡುವ** ಹಂಬಲ ಶ್ರೀಯುತರದ್ದು.

ಆ ನಿಟ್ಟಿನಲ್ಲಿ **ಮೊಬೈಲ್, ಐಪಾಡ್, ಲ್ಯಾಪ್‌ಟಾಪ್ ಇತ್ಯಾದಿ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಅಂತರ್ಜಾಲದ ಮೂಲಕ ಕನ್ನಡಿಗರ ಕೈಗಿತ್ತಿದ್ದಾರೆ. ಆಧುನಿಕ ಒತ್ತಡದ ಬದುಕಿನಲ್ಲಿ ಬಿಡುವಿಲ್ಲದೆ ಪರದಾಡುತ್ತಿರುವ ಜನತೆಗೆ** ಶ್ರೀಪುರಂದರದಾಸರ **ಹರಿಭಕ್ತಿ, ಜೀವನ ಮೌಲ್ಯಗಳು** ಒಟ್ಟಾರೆ ಸಾರ್ಥಕ ಬದುಕಿನ ಬಗೆಯನ್ನು ಆ ಮೂಲಕ ಹರಿದಾಸ ಸಾಹಿತ್ಯದ ಹೃದಯವನ್ನೇ ಮಾತ್ರೆಗಳನ್ನಾಗಿಸಿ **www.purandaradasa.co.in** ಅಂತರ್ಜಾಲದ ಮೂಲಕ ಹಂಚಿದ್ದಾರೆ. ಶ್ರೀ ದಂಡಿನ ಅನಂತರಾವ್ ಅವರ **ಈ ನಿಸ್ವಾರ್ಥ ಪ್ರಯತ್ನ, ಸೇವಾ ಮನೋಭಾವಗಳಿಗೆ ಸಂಪೂರ್ಣ ಯಶಸ್ಸನ್ನು** ಕೋರುತ್ತೇನೆ.

ಶುಭವಾಗಲಿ.

T. N. Nagarathna
(ಡಾ.ಟಿ.ಎನ್.ನಾಗರತ್ನ)